ಇಂದು ದಿಃ 14.10.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರಿದ ಪಾಟೀಸವಾಲು ಆರೋಪಿ ಪರಃ ಶ್ರೀ ಸಿಕೆಎಂ ವಕೀಲರಿಂದಃ

ಆರೋಪಿತನು 15,88,212/- ರೂಪಾಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆಡಿಟ್ ವರದಿಯಲ್ಲಿ ನಮೂದಾಗಿರುವುದಿಲ್ಲ. ವಕೀಲರು ಒಂದು ದೃಢೀಕೃತ ನಕಲು ದಾಖಲೆಯನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯು ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ನಿಪಿ-27 ಎಂದು ಗುರುತಿಸಲ್ಪಟ್ಟಿರುವ ದಾಖಲೆ ಎಂದು ಮಾಡಿದ ಸಲಹೆಗೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದು ಸದರಿ ದಾಖಲಾತಿಯನ್ನು ನಿಡಿ-7 ಎಂದು ಗುರುತಿಸಲಾಯಿತು. ನಿಡಿ-7 ರ ಪ್ರಕಾರ ಆರೋಪಿ ದೊಡ್ಡಣ್ಣನವರು ಬೋರ್ ವೆಲ್ ಪಂಪ್ ಹಾಕಿಸಲು 10,537/- ರೂಪಾಯಿಯನ್ನು ಭರಿಸಿದ್ದರು ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ನಿಡಿ-7 ರಲ್ಲಿ ನಮೂದಾಗಿರುವ ಸದರಿ ಅಂಶವು ಸರಿಯಾದುದಲ್ಲ ಆರೋಪಿಯೇ ಮಾಹಿತಿ ನೀಡಿ ಆಡಿಟ್ ವರದಿಯನ್ನು ಸಿದ್ದಪಡಿಸಿರುತ್ತಾರೆಂದು ನುಡಿದಿರುತ್ತಾರೆ. ನಿಡಿ-7 ರ ಪ್ರಕಾರ ದೊಡ್ಡಣ್ಣನವರಿಗೆ ಬೋರ್ ವೆಲ್ ಪಂಪ್ ಬಾಬ್ತು 10,537/-ರೂಪಾಯಿಯನ್ನು ಪಾವತಿಸಬೇಕಾಗಿರುವುದು ಸರಿಯಾದುದಲ್ಲವೆಂಬ ಬಗ್ಗೆ ನೀವು ಎಲ್ಲಾದರೂ ಪ್ರಶ್ನಿಸಿದ್ದೀರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಿಖರವಾಗಿ ಮಾಡಿಲ್ಲವೆಂದು ನುಡಿದಿರುತ್ತಾರೆ. ಆಡಿಟ್ ವರದಿ ಸಿದ್ದಪಡಿಸಲು ಮಾಹಿತಿಯನ್ನು ವ್ಯವಸ್ಥಾಪಕ ಧರ್ಮದರ್ಶಿಯೇ ನೀಡಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆರೋಪಿಯು ಶಾಲೆಯ ನಿರ್ವಹಣೆ ಮಾಡುತ್ತಿದ್ದುದರಿಂದ ಆರೋಪಿ ನೀಡಿದ ಮಾಹಿತಿಯನ್ನು ನಾನು ಲೆಕ್ಕ ಪರಿಶೋಧಕರಿಗೆ ನೀಡಿರುತ್ತೇನೆಂದು ಸ್ವಯಂ ನುಡಿಯುತ್ತಾರೆ. ಶಾಲೆಯ ಆಡಳಿತ ವ್ಯವಹಾರದ ನಿರ್ವಹಣೆಯನ್ನು ಆರೋಪಿತನಿಗೆ ಒಪ್ಪಿಸಿರುವ ಬಗ್ಗೆ ಯಾವುದೇ ದಾಖಲಾತಿ ಇಲ್ಲ. ಬೈಲಾ ಹಾಗೂ ನಿಯಮದ ಪ್ರಕಾರ ಶಾಲೆಯ ಆಡಳಿತ ನಿರ್ವಹಣೆಯನ್ನು ವ್ಯವಸ್ಥಾಪಕ ಧರ್ಮದರ್ಶಿ ಮಾಡಬೇಕಾಗಿರುತ್ತದೆ ಎಂದರೆ ಸರಿ.

ಮಿಳಿಂದ ವಿದ್ಯಾಸಂಸ್ಥೆ ಸ್ಥಾಪನೆಯಾದಾಗಿನಿಂದಲೂ ಇಲ್ಲಿಯವರೆವಿಗೂ ವ್ಯವಸ್ಥಾಪಕ ಧರ್ಮದರ್ಶಿ ನೀವೇ ಆಗಿರುತ್ತೀರಿ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು 2014 ರವರೆಗೆ ವ್ಯವಸ್ಥಾಪಕ ಧರ್ಮದರ್ಶಿಯಾಗಿ ಕೆಲಸ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. 2014 ರಿಂದ 2017 ರವರೆಗೆ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿರುತ್ತೇನೆ. 2017 ರಿಂದ ಇಲ್ಲಿಯವರೆವಿಗೂ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ವ್ಯವಸ್ಥಾಪಕ ಧರ್ಮದರ್ಶಿ ಎಂಬ ಹುದ್ದೆಯನ್ನು ತೆಗೆದು ಹಾಕಿ ಅದಕ್ಕೆ ಸಮನಾಗಿ ಕಾರ್ಯದರ್ಶಿ ಹುದ್ದೆ ಸೃಷ್ಟಿಸಲಾಗಿದೆ. 1994 ರಿಂದ 2009 ರವರೆಗೆ ಆರೋಪಿಯು 15,88,212/- ರೂಪಾಯಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. 1994 ರಿಂದ 2009 ರ ಅವಧಿಯಲ್ಲಿನ ಆಡಿಟ್ ವರದಿಗಳಲ್ಲಿ ಆರೋಪಿತನು 15,88,212/- ರೂಪಾಯಿ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ನಮೂದಾಗಿಲ್ಲವೆಂದರೆ ಸರಿ. ಸಾಕ್ಷಿಯು ಮುಂದುವರಿದು 2010 ರಲ್ಲಿ ಹಣ ದುರುಪಯೋಗವಾಗಿದೆ ಎಂದು ಕಂಡುಬಂದಾಗ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ 2011 ರಲ್ಲಿ ವರದಿ

14/10/19

ನೀಡಿದ್ದು ಅದರಂತೆ ಆರೋಪಿ ಅವ್ಯವಹಾರ ಮಾಡಿರುವುದು ಸಾಬೀತಾಗಿರುತ್ತದೆ ಎಂದು ಸ್ವಯಂ ನುಡಿದಿರುತ್ತಾರೆ. ಆಡಿಟ್ ವರದಿ ಇಲ್ಲದೇ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕೆಂಬ ನಿಯಮ ಬೈಲಾದಲ್ಲಾಗಲೀ ಅಥವಾ ನಿಯಮದಲ್ಲಾಗಲೀ ಇರಲಿಲ್ಲ.

ಹಣ ದುರುಪಯೋಗವಾಗಿದೆ ಎಂಬ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕಾಗಿದೆ ನೀವು ಸಹಕರಿಸಬೇಕು ಎಂದು ಆರೋಪಿಗೆ ನೀವು ನೋಟೀಸು ಕೊಟ್ಟಿದ್ದೀರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ನೋಟೀಸು ಕೊಟ್ಟಿಲ್ಲ ಆದರೆ ಧರ್ಮದರ್ಶಿಗಳ ಸಭೆಯಲ್ಲಿ ಆರೋಪಿತನ ಸಮ್ಮುಖದಲ್ಲೇ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ತನಿಖೆ ಮಾಡಿಸಬೇಕು ಎಂಬ ಬಗ್ಗೆ ನಿರ್ಣಯವಾಗಿರುತ್ತದೆ ಎಂದು ನುಡಿದಿರುತ್ತಾರೆ. ದಿನಾಂಕ 28.08.2010 ರಂದು ಆ ರೀತಿ ನಿರ್ಣಯ ಮಾಡಲಾಗಿರುತ್ತದೆ. ಆರೋಪಿ ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಬಗ್ಗೆ ದಿನಾಂಕ 28.08.2010 ರಂದು ಆಡಿಟ್ ವರದಿ ಇರಲಿಲ್ಲ. ಹಣ ದುರುಪಯೋಗವಾಗಿದೆ ಎಂಬ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಏನೇನು ದಾಖಲಾತಿ ಕೊಟ್ಟಿದ್ದಿರೀ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಂದು ವರದಿಯನ್ನೇ ತಯಾರಿಸಿ ಕೊಟ್ಟಿರುತ್ತೇವೆಂದು ನುಡಿದಿರುತ್ತಾರೆ. ಸದರಿ ವರದಿಯನ್ನು ನೀವೇ ತಯಾರಿಸಿದ್ದೀರಾ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ಟ್ರಸ್ಟ್ ಒಟ್ಟಾಗಿ ವರದಿ ತಯಾರಿಸಿರುತ್ತದೆ ಎಂದು ನುಡಿದಿರುತ್ತಾರೆ. ವಕೀಲರು ಸಾಕ್ಷಿಗೆ ನಿಶಾನೆಪಿ ಸೀರೀಸ್ ನಲ್ಲಿ ಗುರುತಿಸಲ್ಪಟ್ಟ ದಾಖಲಾತಿಗಳನ್ನು ತೋರಿಸಿ ನೀವು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಕೊಟ್ಟಿರುವ ವರದಿಯನ್ನು ತೋರಿಸಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಿಪಿ.25 ನ್ನು ತೋರಿಸಿ ಇದೇ ನಾನು ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಕೊಟ್ಟಿರುವ ವರದಿ ಎಂದು ನುಡಿದಿರುತ್ತಾರೆ. ನಿಪಿ.25 ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಕೊಟ್ಟ ವರದಿಯಲ್ಲವೆಂದರೆ ಸರಿಯಲ್ಲ. ನಿಪಿ.25 ರಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರು ತನಿಖಾ ಕಾಲದಲ್ಲಿ ಪಡೆದುಕೊಂಡ ವರದಿ ಎಂದು ನಮೂದಾಗಿರುವುದಿಲ್ಲವೆಂದರೆ ಸರಿಯಲ್ಲ. ನಿವೃತ್ತ ಜಿಲ್ಲಾ ನ್ಯಾಯಾಧೀಶರು ಲೆಕ್ಕಪತ್ರಗಳನ್ನು ಪರಿಶೀಲಿಸಿದ್ದಾರೆ ಟ್ರಸ್ಟ್‌ನ ಪರವಾಗಿ ದೊಡ್ಡಣ್ಣನವರ ಕೈಗೆ ಹಣ ಹೋದ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಪರಿಶೀಲನೆ ಮಾಡಿದ್ದಾರೆ. ಟ್ರಸ್ಟಿನ ಪರವಾಗಿ ದೊಡ್ಡಣ್ಣನವರು ಹಣ ಪಡೆದು ಸಹಿ ಮಾಡಿರುವ ದಾಖಲಾತಿ ಇದೆ. ಸದರಿ ದಾಖಲೆಯು ನಿಪಿ.42 ಆಗಿರುತ್ತದೆ. 15,88,212/-ರೂಪಾಯಿಯ ಲೆಕ್ಕ ನಿಪಿ.42 ರಲ್ಲಿ ಕಂಡುಬರುವುದಿಲ್ಲವೆಂದರೆ ಸರಿ. ಸಾಕ್ಷಿಯು ಮುಂದುವರಿದು ಒಟ್ಟು 15,88,212/-ರೂಪಾಯಿಯೊಳಗೆ ನಿಪಿ.42 ರಲ್ಲಿ ನಮೂದಾಗಿರುವ ಹಣ ಕೂಡ ಒಳಗೊಂಡಿರುತ್ತದೆ ಎಂದು ಸ್ವಯಂ ನುಡಿಯುತ್ತಾರೆ. ನಿಪಿ.42 ನ್ನು ವಕೀಲರು ಸಾಕ್ಷಿಗೆ ತೋರಿಸಿ ನಿಪಿ.42 ರ ಪ್ರಕಾರ ರೂ. 78,735/- ಎಂದು ನಮೂದಾಗಿದೆ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ದೊಡ್ಡಣ್ಣನವರು ಒಂದು ದಿನ ಸದರಿ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಆರೋಪಿಯು ನಿಮ್ಮಿಂದ ಹಣ ಪಡೆದುಕೊಂಡಿದ್ದಾರೆಯೇ ಎಂದು ವಕೀಲರು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನಿಂದ ಪಡೆದುಕೊಂಡಿಲ್ಲ

14.10.19

ಸಂಸ್ಥೆಯ ಹಣವನ್ನು ಅಕ್ರಮವಾಗಿ ಪಡೆದುಕೊಂಡಿರುತ್ತಾರೆಂದು ನುಡಿದಿರುತ್ತಾರೆ ಸಂಸ್ಥೆಯ ಹಣವನ್ನು ದೊಡ್ಡಣ್ಣನವರಿಗೆ ಪಾವತಿಸುವಂತೆ ಯಾರಿಗೂ ಸಹ ವಹಿಸಿರಲಿಲ್ಲ. ನಿಪಿ-42 ರಲ್ಲಿರುವ ಬರವಣಿಗೆಗಳು ಜಲಜಾಕ್ಷಿ ಎಂಬ ಶಿಕ್ಷಕಿಯ ಬರವಣಿಗೆಗಳಾಗಿರುತ್ತದೆ. ದೊಡ್ಡಣ್ಣನವರಿಗೆ ಸಂಸ್ಥೆಯ ಹಣ ಪಾವತಿಸುವಂತೆ ನಾನು ಜಲಜಾಕ್ಷಿರವರಿಗೆ ಆದೇಶ ಮಾಡಿರಲಿಲ್ಲ.

ಆರೋಪಿತನು ಜಲಜಾಕ್ಷಿರವರಿಂದ ಸಂಸ್ಥೆಯ ಹಣವನ್ನು ಅಕ್ರಮವಾಗಿ ಪಡೆದುಕೊಂಡಿರುವ ಬಗ್ಗೆ ಮೀಟಿಂಗ್ ನಲ್ಲಿ ಆರೋಪಿತನ ವಿರುದ್ಧ ಕ್ರಮ ಜರುಗಿಸಬೇಕೆಂದು ಠರಾವು ಮಾಡಿದ್ದೀರಾ ಎಂದು ವಕೀಲರು ಮಾಡಿದ ಸಲಹೆಗೆ ಸಾಕ್ಷಿಯು ನಿರ್ದಿಷ್ಟವಾಗಿ ಮಾಡಿಲ್ಲ ಸಮಗ್ರವಾಗಿ ಮಾಡಿರುತ್ತೇವೆಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಸಮಯದ ಅಭಾವದಿಂದ ಮುಂದುವರಿದ ಪಾಟೀಸವಾಲಿಗಾಗಿ ಕೇಸನ್ನು ಮುಂದೂಡಲಾಯಿತು.

(ತೆಗೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿ.ಸಿ.ನ್ಯಾ ಮತ್ತು ಪ್ರದನ್ಯಾದಂ,
ಪಿರಿಯಾಪಟ್ಟಣ.